ಮಂಜೂರಾಗಿದ್ದರೂ ಕೂಡಾ ಈ ನಡುವೆ ಮೃತ ನಿರುಪಮಾಳ ತಾಯಿಯ ಮನೆಗೆ ನುಗ್ಗಿ ತನ್ನ ಮೈನರ್ ಮಗಳಾದ ದೀಪಾಳನ್ನು ಅಪಹರಿಸಲು ಪ್ರಯತ್ನ ಪಟ್ಟನೆಂದು ಮತ್ತೊಂದು ಕ್ರಿಮಿನಲ್ ಪ್ರಕರಣವು ಆತನ ವಿರುದ್ಧ ದಾಖಲಾಗಿ, ಆತನ ಜಾಮೀನು ರದ್ದಾಗಿ ಮತ್ತೆ ಜೈಲಿನಲ್ಲಿದ್ದ. 'ಎಂತಹ ನತದೃಷ್ಟ ನೀನು ಜಯಶಂಕರ... ಪತ್ನಿಯಂತೂ ಇಲ್ಲ. ಇಂತಹ ಮಗು, ಮುದ್ದಾದ, ಮುಗ್ಧವಾದ ಮತ್ತು ಎಲ್ಲವನ್ನೂ ಮರೆಸುವ ಪ್ರೀತಿಯ ಮಾಂತ್ರಿಕ ಶಕ್ತಿ ಇರುವ ಅದ್ಭುತ ಕೂಸಿನ ನಂಟನ್ನು ನೀನು ಕಡಿದುಕೊಂಡೆಯಲ್ಲಾ... ಎಂತಹ ಜನ್ಮ ನಿನ್ನದು...'

'ಅಂದ ಹಾಗೆ ನಿನ್ನ ಹೆಂಡತಿಯನ್ನು ಯಾಕೆ ಕೊಂದೆ?'

'ನಾನು ಕೊಲ್ಲಲಿಲ್ಲ... ಅವಳೇ ಸತ್ತಳು.'

'ಅದು ಹೇಗೆ ಅವಳೇ ಸಾಯುತ್ತಾಳೆ? ನಾನು ಜಡ್ಜ್‌ಮೆಂಟಲ್ ಆಗೋಲ್ಲ... ಖಂಡಿತ ಆಗೋದಿಲ್ಲ. ನೀನೇ ಹೇಳು, ಅವಳು ಹೇಗೆ ಸತ್ತಳು.'

'ನನಗೆ ಗೊತ್ತಿಲ್ಲ.'

'ಇದು ಕೋರ್ಟಲ್ಲ ಜಯಶಂಕರ. ಇಲ್ಲಿ ನಾನು ನಿನ್ನ ಕೊಲೆಯ ಕೇಸಿನಲ್ಲಿ ತೀರ್ಪನ್ನು ಕೊಡ್ತಿಲ್ಲ. ನಿನ್ನ ಮಗುವಿನ ಕರಾಳ ಭೂತದ ಅಂಧಕಾರದಿಂದ ಉಜ್ವಲ ಮುಂದಿನ ಬದುಕಿನ ಬಗ್ಗೆ ನಾನು ತೀರ್ಮಾನಿಸಬೇಕಿದೆ. ಕಮಾನ್... ಈಗಲಾದರೂ ಮಾನವೀಯವಾಗಿ ನಡೆದುಕೋ ಹೇಳು...'

'ನಾನು ಹೇಳೋದಿಲ್ಲ...' ಧಡಾರ್ ಎಂದು ಎಲ್ಲೋ ಬಾಗಿಲು ಬಡಿದ ಸದ್ದು. ಹಿಂದೆಯೇ ಅಗುಳಿ ಜಾರಿಸಿದ, ಬಂಧನದ ವಿಚಿತ್ರ ನರಳಾಟದ ವಾಸನೆ.

ಒಮ್ಮೆಲೇ ಅವನು ವಾಸ್ತವ ಲೋಕಕ್ಕೆ ಮರಳಲು ಪ್ರಯತ್ನಿಸಿದರೂ ಸಾಧ್ಯವಾಗದೆ ಇನ್ನೊಂದು ಸುಳಿಯಲ್ಲಿ ಸಿಲುಕಿಕೊಂಡ. ಅವನ ಕಣ್ಣೆದುರಿಗೆ ಆ ಪುಟ್ಟ ಬಾಲಕಿ ಇದ್ದಳು. ಅಭಿರಕ್ಷೆಯ ಕೇಸ್‌ಗಳಲ್ಲಿ ಈ ರೀತಿಯ ಅನೇಕ ಬಾಲಕ ಬಾಲಕಿಯರನ್ನು ಅವನು ಈಗಾಗಲೇ ನೋಡಿದ್ದ. ಅವನ ನೆನಪಿನಲ್ಲಿ ಉಳಿದ ಮಕ್ಕಳೆಷ್ಟು, ಅವನು ಮರೆತ ಮಕ್ಕಳೆಷ್ಟು, ದೂಳು ಮುಸುಕಿದಂತೆ ಆಗಿದ್ದ ಕೆಲ ಮಕ್ಕಳ ನೆನಪು ಧುತ್ತನೆ ಎದುರಿಗೆ ಬಂದು ನಿಂತು ಅವನನ್ನು ಕಾಡಿಸುತ್ತಿದ್ದ ಪರಿ ಎಂತು; ಹಾಗೆ ಅಂದುಕೊಂಡಾಗ ಅವನೆದುರಿಗೆ ಮೂಡಿ ಬಂದವಳು ನಿವೇದಿತಾ. ಆಕೆ ಕೂಡ ಸರಿ ಸುಮಾರು ಇದೇ ವಯಸ್ಸಿನ ಹೆಣ್ಣು ಮಗಳು. ಅವಳು ಅತೀವ ಬುದ್ಧಿವಂತೆ ಎನ್ನಲು ಅವಳ ಕಣ್ಣುಗಳೇ ಸಾಕ್ಷಿ. ನಕ್ಷತ್ರಗಳಂತೆ ಫಳಫಳ ಹೊಳೆಯುವ ಕಣ್ಣುಗಳು ಅವಳ ಹೆಗ್ಗುರುತು. ಸುಮಾರು ಐದು ವರ್ಷಗಳ ಕಾಲ ನಡೆದ ಅವಳ ಅಪ್ಪ ಅಮ್ಮನ ಡೈವೋರ್ಸ್ ಪ್ರಕರಣದಲ್ಲಿ. ಆಕೆಯ ತಾಯಿ ಕಲ್ಯಾಣಿ ನಿವೇದಿತಾಳನ್ನು ಎಂದಿಗೂ ಕೋರ್ಟಿಗೆ ಕರೆದುಕೊಂಡು ಬರಲಿಲ್ಲ. ಆದರೆ ಅವರ ವಿವಾದ ಅತಿರೇಕಕ್ಕೆ ಹೋಯಿತು. ನಿವೇದಿತಾಳ ತಾಯಿ ಪದೇ ಪದೇ ಹೇಳುತ್ತಿದ್ದ ಮುಖ್ಯ ಆರೋಪ ಹೀಗಿತ್ತು; ನಿವೇದಿತಾಳ ಅಪ್ಪ ಕುಮಾರ ಸ್ವಾಮಿ ಹುಟ್ಟಿದಾಗಿನಿಂದಲೂ ಅವಳನ್ನು ಕಂಡಿಲ್ಲ, ಎತ್ತಿಲ್ಲ, ಆಡಿಸಿಲ್ಲ; ಅವನಿಗೆ ಅವಳೊಡನೆ ಯಾವ ಬಾಂಧವ್ಯವೂ ಇಲ್ಲ... ಅವಳಿಗೆ ಯಾವುದೇ ಹಬ್ಬಕ್ಕೆ ಒಂದು ಫ್ರಾಕನ್ನು ಕೂಡಾ ಕೊಟ್ಟಿಲ್ಲ. ಯಾವುದೇ ಹುಟ್ಟು ಹಬ್ಬಕ್ಕೆ ಕನಿಷ್ಠ ಒಂದು ಗುಲಾಬಿಯನ್ನು ಉಡುಗೊರೆಯಾಗಿ ಕೊಟ್ಟಿಲ್ಲ. ಅವನು ತನಗೆ ತೊಂದರೆ ಮಾಡುವ ಸಲುವಾಗಿ ಮಾತ್ರ ನಿವೇದಿತಾಳ ಅಭಿರಕ್ಷೆಯನ್ನು ಕೋರುತ್ತಿದ್ದಾನೆ. ಅವನ ಕಸ್ಟಡಿಯಲ್ಲಿ ನಿವೇದಿತಾಳನ್ನು ವಹಿಸಿಕೊಟ್ಟಲ್ಲಿ ಅವಳ ಮುಂದಿನ ಜೀವನಕ್ಕೆ ಅಪಾರ ತೊಡಕುಂಟಾಗುತ್ತದೆ. ಅವಳ ನಿರಂತರವಾದ ಈ ಆರೋಪವನ್ನು ಒರೆಗೆ ಹಚ್ಚಬೇಕೆಂದು ಶಾಹಿದ್ ಹೊಸ ದಾರಿಯೊಂದನ್ನು ಹುಡುಕಿದ. ಕೋರ್ಟಿನ ಸಮ್ಮುಖದಲ್ಲಿ ನಿವೇದಿತ, ಅವಳ ಅಮ್ಮ ಕಲ್ಯಾಣಿ ಮತ್ತು ಕುಮಾರಸ್ವಾಮಿ ಮೂವರು ಒಟ್ಟಿಗೆ ಹಾಜರಾದರು. ನಿವೇದಿತಾ ತಾಯಿಗೆ ಅಂಟಿಕೊಂಡೇ ನಿಂತಿದ್ದಳು. ಎತ್ತರದ ಪೀಠದ ಮೇಲೆ ಆಸೀನನಾಗಿದ್ದ ಶಾಹಿದ್ ಹುಸೇನ್ ಮಗುವನ್ನು